# ಕನ್ನಡ ವಿಶ್ವವಿದ್ಯಾಲಯ,ಹಂಪಿ

ವಿದ್ಯಾರಣ್ಯ-೫೮೩ ೨೭೬

## ಸೆಪ್ಟೆಂಬರ್ ೬, ೨೦೧೭ರ ಬುಧವಾರದಂದು ನಡೆದ ವಿಶೇಷ ಕಾರ್ಯಕಾರಿ ಸಮಿತಿಯ ೧೪೯ನೇ ಸಭೆಯ ನಡೆವಳಿಗಳು

**ಸಭೆಯಲ್ಲಿ ಉಪಸ್ಥಿತರಿದ್ದವರು:**

| | | |
|---|---|---|
| ೦೧. | ಡಾ. ಮಲ್ಲಿಕಾ. ಎಸ್. ಘಂಟಿ, ಮಾನ್ಯ ಕುಲಪತಿಗಳು, ಕ.ವಿ.ಹಂ. | : ಅಧ್ಯಕ್ಷರು |
| ೦೨. | ಶ್ರೀ ಅಲ್ಲಮಪ್ರಭು ಬೆಟ್ಟದೂರು, ಕೊಪ್ಪಳ | : ಸದಸ್ಯರು |
| ೦೩. | ಪ್ರೊ. ಎ.ವಿ. ನಾವಡ, ಮಂಗಳೂರು | : ಸದಸ್ಯರು |
| ೦೪. | ಡಾ. ವೀರಣ್ಣ ರಾಜೂರ, ಧಾರವಾಡ | : ಸದಸ್ಯರು |
| ೦೫. | ಡಾ. ಓ. ಓಬಯ್ಯ, ನಿವೃತ್ತ ಪ್ರಾಧ್ಯಾಪಕರು, ಬೆಂಗಳೂರು | : ಸದಸ್ಯರು |
| ೦೬. | ಶ್ರೀಮತಿ ಮಹಾದೇವಿ ಗೋಕಾಕ್, ವಿಜಯಪುರ | : ಸದಸ್ಯರು |
| ೦೭. | ಶ್ರೀ ಸರಜೂ ಕಾಟ್ಕರ್, ಬೆಳಗಾವಿ | : ಸದಸ್ಯರು |
| ೦೮. | ಡಾ. ಎ. ಮೋಹನ ಕುಂಟಾರ್, ಡೀನ್, ಭಾಷಾ ನಿಕಾಯ, ಕ.ವಿ.ಹಂ. | : ಸದಸ್ಯರು |
| ೦೯. | ಡಾ. ಮಂಜುನಾಥ ಬೇವಿನಕಟ್ಟಿ, ಡೀನ್, ಸಮಾಜವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೦. | ಡಾ. ಅಶೋಕಕುಮಾರ ರಂಜೇರೆ, ಡೀನ್, ಲಲಿತಕಲೆಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೧. | ಡಾ. ಸಿ.ಮಹಾದೇವ, ಡೀನ್, ವಿಜ್ಞಾನಗಳ ನಿಕಾಯ, ಕ.ವಿ.ಹಂ. | : ಸದಸ್ಯರು |
| ೧೨. | ಡಾ. ಸಿದ್ಧಗಂಗಮ್ಮ, ಹಣಕಾಸು ಅಧಿಕಾರಿಗಳು, ಕ.ವಿ.ಹಂ. | : ವಿಶೇಷ ಆಹ್ವಾನಿತರು |
| ೧೩. | ಡಾ. ಡಿ. ಪಾಂಡುರಂಗಬಾಬು, ಕುಲಸಚಿವರು, ಕ.ವಿ.ಹಂ. | : ಪದನಿಮಿತ್ತ ಕಾರ್ಯದರ್ಶಿ |

**ಸಭೆಯಲ್ಲಿ ಅನುಪಸ್ಥಿತರಿದ್ದವರು:**

| | | |
|---|---|---|
| ೦೧. | ಪ್ರೊ. ಸಿದ್ಧಲಿಂಗಯ್ಯ, ಬೆಂಗಳೂರು | : ಸದಸ್ಯರು |
| ೦೨. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | : ಸದಸ್ಯರು |
| ೦೩. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಹಣಕಾಸು ಇಲಾಖೆ, ಬೆಂಗಳೂರು | : ಸದಸ್ಯರು |
| ೦೪. | ಸರ್ಕಾರದ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | : ಸದಸ್ಯರು |
| ೦೫. | ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | : ಸದಸ್ಯರು |
| ೦೬. | ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಬೆಂಗಳೂರು | : ಸದಸ್ಯರು |

ಸಭೆಯ ಆರಂಭದಲ್ಲಿ ಕುಲಸಚಿವರು ಕಾರ್ಯಕಾರಿ ಸಮಿತಿ ಸದಸ್ಯರನ್ನು ಸಭೆಗೆ ಸ್ವಾಗತಿಸಿದರು.

೧. ಮಾನ್ಯ ಕುಲಸಚಿವರು ಮತ್ತು ಮಾನ್ಯ ಕುಲಪತಿಗಳು ನೂತವಾಗಿ ನೇಮಕಗೊಂಡ ಕಾರ್ಯಕಾರಿ ಸಮಿತಿ ಸದಸ್ಯರನ್ನು ಸ್ವಾಗತಿಸಿದರು ಹಾಗೂ ಎಲ್ಲ ಸದಸ್ಯರನ್ನು ಪರಸ್ಪರ ಪರಿಚಯ ಮಾಡಿಕೊಳ್ಳಲಾಯಿತು.

೨. ಕನ್ನಡ ವಿಶ್ವವಿದ್ಯಾಲಯದ ಅಧಿನಿಯಮ ಮತ್ತು ಪರಿನಿಯಮಗಳನ್ನು ಎಲ್ಲ ಸದಸ್ಯರಿಗೆ ಒದಗಿಸಲಾಗುವುದು ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

೩. ಸದಸ್ಯರಾದ ಪ್ರೊ. ಎ.ವಿ. ನಾವಡ ಅವರು ಬೋಧನಾಂಗವನ್ನು ಪ್ರಶಂಶಿಸುತ್ತಾ ಇನ್ನೂ ಹೆಚ್ಚಿನ ಪುಸ್ತಕಗಳನ್ನು ಪ್ರಕಟಿಸಲು ಸೂಚಿಸಿದರು. ಇದಕ್ಕೆ ಸಂಬಂಧಿಸಿದಂತೆ ೧೦ ಮಾಲಿಕೆಗಳನ್ನು ಬಿಡುಗಡೆ ಮಾಡಲು ಹಾಗೂ ಬೆಳ್ಳಿಹಬ್ಬದ ನಿಮಿತ್ತ ಅನುದಾನ ಬಂದನಂತರ ೫೦೦ ಪ್ರಕಟಣೆಗಳನ್ನು ಪ್ರಕಟಿಸಲು ತೀರ್ಮಾನಿಸಲಾಗಿದೆ. ಎಂದು ಮಾನ್ಯ ಕುಲಪತಿಗಳು ಸಭೆ ತಿಳಿಸಿದರು.

೪. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಅಲ್ಲಮಪ್ರಭು ಬೆಟ್ಟದೂರು ಅವರು ಪಿ.ಯು.ಸಿ ವಿಜ್ಞಾನ ಪುಸ್ತಕಗಳ ಮುದ್ರಣಕ್ಕೆ ಸಂಬಂಧಿಸಿ ಪುಸ್ತಕಗಳನ್ನು ಕನ್ನಡದಲ್ಲಿ ಪ್ರಕಟಿಸುವ ಬಗ್ಗೆ ಮರುಪರಿಶೀಲಿಸಲು ಸೂಚಿಸಿದರು.

೫. ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನೊಳಡಂತೆ ವಿಶ್ವವಿದ್ಯಾಲಯದ ಬೆಳವಣಿಗೆಗಾಗಿ ಹೊಸ ಪ್ರಸ್ತಾವನೆಗಳನ್ನು ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಲು ಸಮಿತಿಯ ಎಲ್ಲಾ ಸದಸ್ಯರನ್ನು ಮಾನ್ಯ ಕುಲಪತಿಗಳು ಕೋರಿದರು.

೬. ವಿಶ್ವವಿದ್ಯಾಲಯದ ಎಲ್ಲ ಆಡಳಿತ ಮಂಡಳಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ವಿಶ್ವವಿದ್ಯಾಲಯದ ಶೈಕ್ಷಣಿಕ ವಿಚಾರವಾಗಿ ಚರ್ಚಿಸಲು ಶಿಕ್ಷಣ ಸಚಿವರನ್ನು ಒಮ್ಮೆ ಬೇಟಿಮಾಡಲು ಮಾನ್ಯ ಕುಲಪತಿಗಳು ಎಲ್ಲ ಸದಸ್ಯರಲ್ಲಿ ಮನವಿ ಮಾಡಿದರು. ಇದಕ್ಕೆ ಎಲ್ಲ ಸದಸ್ಯರು ಒಪ್ಪಿಗೆಯನ್ನು ನೀಡಿ ಸಮಯವನ್ನು ನಿಗದಿಪಡಿಸಲು ಸೂಚಿಸಿದರು.

ದಿನಾಂಕ: ೨೮.೦೭.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೮ನೇ ಸಭೆಯ ನಡವಳಿಗಳ ಸ್ಥಿರೀಕರಣ ಹಾಗೂ ಅನುಮೋದನೆ ನೀಡುವ ಕುರಿತು. (ಅನುಬಂಧ-೦೧)

ನಿರ್ಣಯ: ಮಂಡಿಸಲಾದ ನಡವಳಿಗಳನ್ನು ಸ್ಥಿರೀಕರಿಸಿ ಅನುಮೋದಿಸಲಾಯಿತು.

ದಿನಾಂಕ: ೨೮.೦೭.೨೦೧೭ರಂದು ನಡೆದ ಕಾರ್ಯಕಾರಿ ಸಮಿತಿಯ ೧೮೮ನೇ ಸಭೆಯ ನಡವಳಿಗಳ ಅನುಪಾಲನಾ ವರದಿಗೆ ಅನುಮೋದನೆ ನೀಡುವ ಕುರಿತು.(ಅನುಬಂಧ-೦೨)

ನಿರ್ಣಯ: ಮಂಡಿಸಲಾದ ನಡವಳಿಗಳ ಅನುಪಾಲನಾ ವರದಿಯನ್ನು ಅನುಮೋದಿಸಲಾಯಿತು.

೧೮೯.೦೧. ದಿನಾಂಕ ೧೨.೦೯.೨೦೧೭ರಂದು ನಡೆಯುವ ಬೆಳ್ಳಿಹಬ್ಬದ ಕುರಿತು ಚರ್ಚೆ ಮತ್ತು ಅನುಮೋದನೆ ಕೋರಿ.

ನಿರ್ಣಯ: ೧. ಮಾನ್ಯ ಕುಲಪತಿಗಳು ಬೆಳ್ಳಿಹಬ್ಬದ ಕಾರ್ಯಕ್ರಮದ ರೂಪರೇಶಗಳೆಲ್ಲವನ್ನೂ ಕಾರ್ಯಕಾರಿ ಮತ್ತು ಆಡಳಿತ ಮಂಡಳಿ ಸದಸ್ಯರಿಗೆ ಹಾಗೂ ಸಭೆಗೆ ತಿಳಿಯಪಡಿಸಿದರು.

೨. ಬೆಳ್ಳಿಹಬ್ಬದ ನಿಮಿತ್ತ ವರ್ಷವಿಡೀ ಕೈಗೊಳ್ಳುವ ಕಾರ್ಯಕ್ರಮಗಳ ಸ್ಥೂಲ ಮಾಹಿತಿಯನ್ನು ಸಭೆಗೆ ಮಾನ್ಯ ಕುಲಪತಿಗಳು ತಿಳಿಸಿದರು. ವಿವಿಯ ಬೆಳ್ಳಿಹಬ್ಬವನ್ನು ಪ್ರಚಾರ ಮಾಧ್ಯಮಗಳ ಮೂಲಕ ಪ್ರಚಾರವನ್ನು ಕೈಗೊಳ್ಳಲು ಸಭೆ ಸೂಚಿಸಿತು.

೩. ಬೆಳ್ಳಿಹಬ್ಬದ ಬೃಹತ್ ವೇದಿಕೆ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಂಸಿಗ್ ಲಿಮಿಟೆಡ್, ಬೆಂಗಳೂರು ಇವರಿಗೆ ಆದೇಶವನ್ನು ನೀಡಲಾಗಿತ್ತು. ಇವರು ನಿಗದಿಗೊಳಿಸಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಕೋರಿದ ಹಿನ್ನೆಲೆಯಲ್ಲಿ ಇವರಿಗೆ ನೀಡಲಾದ ಆದೇಶವನ್ನು ರದ್ದುಪಡಿಸಲು ಹಾಗೂ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ಮಾಹಿತಿ ಹಕ್ಕು ಕಾಯ್ದೆಗೆ ಸಂಬಂಧಿಸಿದಂತೆ ವಿವರಗಳನ್ನು ಸದರಿ ಸಂಸ್ಥೆಯೇ ನೀಡುವ ಒಪ್ಪಂದದ ಮೇರೆಗೆ ವೇದಿಕೆ ನಿರ್ಮಾಣ ಕಾರ್ಯವನ್ನು ನೀಡಲು ಹಾಗೂ ಕಾಲಕಾಲಕ್ಕೆ ಬದಲಾವಣೆ ಯೊಂದಿಗೆ ಅಂದಾಜು ವೆಚ್ಚಕ್ಕೆ ಅನುಮೋದನೆ ನೀಡಿತು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು

೧೮೯.೦೨. ದಿನಾಂಕ ೧೨.೦೯.೨೦೧೭ರಂದು ನಡೆಯುವ ಬೆಳ್ಳಿಹಬ್ಬದ ಅಂದಾಜು ಖರ್ಚುವೆಚ್ಚಗಳ ಹಣಕಾಸು ವಿಭಾಗದ ಪ್ರಸ್ತಾವನೆಗಳಿಗೆ ಅನುಮೋದನೆ ಕೋರಿ (ಪ್ರಸ್ತಾವನೆಗಳನ್ನು ಲಗತ್ತಿಸಿದೆ).

ನಿರ್ಣಯ: ೧. ದಿನಾಂಕ ೧೨.೦೯.೨೦೧೭ರಂದು ನಡೆಯುವ ಬೆಳ್ಳಿಹಬ್ಬದ ಅಂದಾಜು ಖರ್ಚುವೆಚ್ಚಗಳ ಹಣಕಾಸು ವಿಭಾಗದ ಪ್ರಸ್ತಾವನೆಗಳನ್ನು ಸಭೆಯು ಪರಿಶೀಲಿಸಿ ಬೆಳ್ಳಿಹಬ್ಬದ ವಿಶೇಷ ಕಾರ್ಯಕ್ರಮಗಳಿಗಾಗಿ ಹಣಕಾಸು ವಿಭಾಗವು ಸಲ್ಲಿಸಿರುವ ರೂ.೨,೦೦,೦೦,೦೦೦/- (ಎರಡು ಕೋಟಿ ರೂ ಮಾತ್ರ)ಗಳ ಅಂದಾಜು ವೆಚ್ಚದ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಿತು.

೨. ಬೆಳ್ಳಿಹಬ್ಬಕ್ಕೆ ಆಗಮಿಸುವ ಗಣ್ಯಾತಿಗಣ್ಯರಿಗೆ ಪ್ರಯಾಣದ ಕಾರು ದರ ಕಿ.ಮೀ. ಒಂದಕ್ಕೆ ರೂ. ೧೦/- ರಿಂದ ರೂ.೧೨/-ಗಳಿಗೆ ಹೆಚ್ಚಿಸಲು ಸಭೆ ಅನುಮೋದನೆ ನೀಡಿತು.

೩. ಬೆಳ್ಳಿಹಬ್ಬಕ್ಕೆ ಆಗಮಿಸುವ ಗಣ್ಯಾತಿಗಣ್ಯರಿಗೆ ಸಂಭಾವನೆ, ಕಲಾತಂಡಗಳಿಗೆ ಸಂಭಾವನೆ, ವಿಚಾರ ಸಂಕಿರಣಕ್ಕೆ ಆಗಮಿಸುವ ಗಣ್ಯರು ಮತ್ತು ಅತಿಥಿಗಳಿಗೆ ಪ್ರಯಾಣದ ಕಾರು ದರ (ಕಿ.ಮೀ. ಒಂದಕ್ಕೆ) ಹಾಗೂ ಸಂಭಾವನೆ (ಸಂಭಾವನೆ/ ಪ್ರಯಾಣ/ ಊಟ/ ವಾಹನ ವೆಚ್ಚ ಒಳಗೊಂಡಂತೆ)ಯಂತಹ ದರಗಳನ್ನು ಸಂದರ್ಭಾನುಸಾರ ನಿಗದಿಪಡಿಸಲು ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿತು.

೧೮೯.೦೩. ೨೦೧೬-೧೭ನೇ ಸಾಲಿನಲ್ಲಿ ಕನ್ನಡ ವಿಶ್ವವಿದ್ಯಾಲಯವು ಸಲ್ಲಿಸುವ ವಾರ್ಷಿಕ ವರದಿ ಅನುಮೋದನೆ ಕೋರಿ.

ನಿರ್ಣಯ: ೨೦೧೬-೧೭ನೇ ಸಾಲಿನ ಕನ್ನಡ ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆ ಅನುಮೋದನೆ ನೀಡಿತು.

೧೮೯.೦೪. ದೂರಶಿಕ್ಷಣ ನಿರ್ದೇಶನಾಲಯ ಸಲ್ಲಿಸಿರುವ ಪ್ರಸ್ತಾವನೆಗಳ ಕುರಿತು.

೧. ದೂರಶಿಕ್ಷಣ ನಿರ್ದೇಶನಾಲಯದ ಕೋರ್ಸ್‌ಗಳಿಗೆ ಯುಜಿಸಿ ಮಾನ್ಯತೆ ಕುರಿತು.
೨. ೨೦೧೭-೧೮ನೇ ಸಾಲಿನ ಪ್ರವೇಶ ಪ್ರಕ್ರಿಯೆ ಮತ್ತು ಪ್ರಚಾರ/ ಜಾಹೀರಾತು ಕುರಿತು.
೩. ಯುಜಿಸಿ/ಡೆಬ್‌ನಿಂದ ಡಿ.ಇ.ಸಿ.ಗೆ ಅನುದಾನ ಕುರಿತು.
೪. ಹೊಸ ಕೋರ್ಸ್‌ಗಳ ಮತ್ತು ಅದರ ಪಠ್ಯಗಳ ಕುರಿತು.
೫. ದೂರಶಿಕ್ಷಣ ನಿರ್ದೇಶನಾಲಯದಿಂದ ನಡೆಯುವ ಕಾರ್ಯಕ್ರಮ ಬಿ.ಓ.ಎಸ್., ಬಿ.ಓ.ಇ., ಸಮಿತಿ ಆಂತರಿಕ (ಕನ್ನಡ ವಿಶ್ವವಿದ್ಯಾಲಯ, ಹಂಪಿ) ಸದಸ್ಯರುಗಳಿಗೆ ಸ್ಥಳೀಯ ಭತ್ಯೆ ಕುರಿತು.
೬. ಪರೀಕ್ಷಾಕಾರ್ಯ, ಪ್ರಶ್ನೆ ಪತ್ರಿಕೆ ಸಿದ್ಧತೆ ಮತ್ತು ಮೌಲ್ಯಮಾಪನ ಹಾಗೂ ಸಂಪರ್ಕ ತರಗತಿ ಕಾರ್ಯದಲ್ಲಿ ಭಾಗವಹಿಸುವ ಆಂತರಿಕ (ಕನ್ನಡ ವಿಶ್ವವಿದ್ಯಾಲಯ, ಹಂಪಿ) ಅಧ್ಯಾಪಕರುಗಳಿಗೆ ಸಂಭಾವನೆ ಇತರೆ ಭತ್ಯೆ ಕುರಿತು.

೭. ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಂಬಂಧಿಸಿದ ಯುಜಿಸಿ ಕಾರ್ಯಗಳನ್ನು ನಿರ್ವಹಿಸುವ ಮತ್ತು ವಿದ್ಯಾರ್ಥಿ ವಿವರ ಅಥವಾ ದಾಖಲಾತಿ ಕಾರ್ಯಕ್ಕೆ ಸಂಬಂಧಿಸಿದ ಕಾರ್ಯನಿರ್ವಹಿಸುವ ಸಿಬ್ಬಂದಿಗಳ ಅಗತ್ಯತೆ ಕುರಿತು.

೮. ದೂರಶಿಕ್ಷಣ ನಿರ್ದೇಶನಾಲಯದ ಕಾರ್ಯಸಂಬಂಧವಾಗಿ ರಜಾ ದಿನಗಳೂ ಹಾಗೂ ಹೆಚ್ಚುವರಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸಂಭಾವನೆ ಕುರಿತು.

ನಿರ್ಣಯ: ೧. ಫ್ಯಾಕಲ್ಟಿ ಬಗ್ಗೆ ಸರ್ಕಾರಕ್ಕೆ ಒಟ್ಟಾಗಿ ಬೇಟಿಯಾಗುವುದಾಗಿ ತಿಳಿಸಿದರು.

೨. ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ಸಿಬ್ಬಂದಿಗಳಿಗೆ ಸಂಭಾವನೆ ನೀಡುವ ಕುರಿತು ಸರ್ಕಾರದ ಆದೇಶದಂತೆ ಸಂಭಾವನೆ ನೀಡುವುದನ್ನು ನಿಲ್ಲಿಸಲು ಸೂಚಿಸಿತು.

೩. ಆಡಳಿತ ಸಿಬ್ಬಂದಿಗಳಿಗೆ ನಿಯಮಾನುಸಾರ ಹೆಚ್ಚುವರಿ ಕೆಲಸಕ್ಕೆ ಸಂಭಾನೆ ನೀಡಲು ಸಭೆ ಅನುಮತಿ ನೀಡಿತು.

೧೮೯.೦೫. ಪ್ರಸಾರಾಂಗದ ಪ್ರಸ್ತಾವನೆಗಳ ಕುರಿತು.

೧. ಪ್ರಸಾರಾಂಗದ ಪುಸ್ತಕ ಮಾರಟಕ್ಕಾಗಿ ಸುಸಜ್ಜಿತ ವಾಹನವನ್ನು ಒದಗಿಸಲು ಕೋರಿದ್ದಾರೆ.

೨. ಪ್ರಸಾರಾಂಗದ ಪ್ರಕಟಣೆ ಮಾರಾಟ ದಾಸ್ತಾನು ಮತ್ತು ಆಡಳಿತಾತ್ಮಕ ಕಾರ್ಯನಿರ್ವಹಣೆಯಲ್ಲಿ ಗಣಕೀಕರಣ ತಂತ್ರಾಂಶಗಳನ್ನು ಅಳವಡಿಸಬೇಕಾಗಿದ್ದು, ತಂತ್ರಾಂಶ ಬಲ್ಲವರಿಂದ ತಂತ್ರಾಂಶಗಳನ್ನು ಅಳವಡಿಸಿಕೊಳ್ಳಬೇಕಾದ ಬಗ್ಗೆ ಅನುಮೋದನೆ ಕೋರಿದೆ.

೩. ಗೌತಮ ಬುಕ್ ಹೌಸ್, ಕಮಲಾಪುರ ಇವರು ಪ್ರಸಾರಾಂಗದ ಪ್ರಕಟಣೆಗಳ ಪ್ರದರ್ಶನ ಮತ್ತು ಮಾರಾಟವನ್ನು ಕೈಗೊಳ್ಳಲು ಅವಕಾಶ ಮಾಡಿಕೊಡಲಾಗಿದ್ದು ಕೃಷಿ ಮೇಳ, ಬಾಗಲಕೋಟೆ, ಧಾರವಾಡ ಸಾಹಿತ್ಯ ಸಂಭ್ರಮ, ಧಾರವಾಡ ಮತ್ತು ಕನ್ನಡ ಪುಸ್ತಕ ರಿಯಾಯಿತಿ ಮಾರಾಟ ಮೇಳ, ಯಾದಗಿರಿ ಈ ಸ್ಥಳಗಳಲ್ಲಿ ಆಡಳಿತಾತ್ಮಕ ಅನುಮೋದನೆಯೊಂದಿಗೆ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟಿದ್ದು, ಈ ಸ್ಥಳಗಳಲ್ಲಿ ಕೈಗೊಂಡ ಪುಸ್ತಕ ಮಾರಾಟದ ಕಾರ್ಯನಿರ್ವಹಣೆಗೆ ಸಭೆಯ ಘಟನೋತ್ತರ ಅನುಮೋದನೆ ಕೋರಿದೆ.

ನಿರ್ಣಯ: ೧. ಪುಸ್ತಕ ಮಾರಾಟಕ್ಕಾಗಿ ಸುಸಜ್ಜಿತ ವಾಹನದ ಪ್ರಸ್ತಾವನೆಗೆ ಅನುಮೋದನೆ ನೀಡಿತು.

೨. ಪುಸ್ತಕಗಳ ಮಾರಾಟ ಮತ್ತು ಪುಸ್ತಕ ದಾಸ್ತಾನುಗಳ ಗಣಕೀಕರಣ ಮಾಡುವ ತಂತ್ರಾಂಶ ಅಳವಡಿಕೆ ಸಭೆ ಅನುಮೋದನೆ ನೀಡಿತು.

೩. ಗೌತಮ ಬುಕ್ ಹೌಸ್ ಸಂಸ್ಥೆಯು ಕೈಗೊಂಡ ಪ್ರಸಾರಾಂಗದ ಪುಸ್ತಕಗಳ ಮಾರಾಟದ ಕಾರ್ಯಗಳಿಗೆ ಸಭೆಯು ಘಟನೋತ್ತರ ಅನುಮೋದನೆ ನೀಡಿತು.

೧೮೯.೦೬. ನಿರುಪಯುಕ್ತ ವಾಹನಗಳ ಹರಾಜಿಗೆ ಅನುಮೋದನೆ ಕೋರಿದೆ.

೧. ವಿಶ್ವವಿದ್ಯಾಲಯದ ಬಳಕೆಯಲ್ಲಿರುವ ಕೆಎ- ೩೫/ ೧೩೬೩ ಮ್ಯಾಕ್ಸಿವ್ಯಾನ್ ವಾಹನವನ್ನು ದಿನಾಂಕ ೨೬.೦೩.೧೯೯೩ರಲ್ಲಿ ಖರೀದಿಸಿದ್ದು, ಒಟ್ಟು ೨೪ ವರ್ಷ, ೪ ತಿಂಗಳು ಪೂರ್ಣಗೊಂಡಿರುತ್ತದೆ.

೨. ಕೆಎ-೩೫, ಎಂ-೧೫೩೫ ಕಾಂಟೆಸ್ಸಾ ವಾಹನವನ್ನು ದಿನಾಂಕ ೨೨.೦೫.೨೦೦೨ರಲ್ಲಿ ಖರೀದಿಸಿದ್ದು, ೧೫ ವರ್ಷ ಪೂರ್ಣಗೊಂಡಿರುತ್ತದೆ.

ಈ ಎರಡು ವಾಹನಗಳು ನಿರುಪಯುಕ್ತ ಎಂದು ಘೋಷಿಸಿ ಹರಾಜು ಹಾಕಲು ಹಾಗೂ ಸರ್ಕಾರಿ ವಾಹನಗಳನ್ನು ನಿರುಪಯುಕ್ತ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಘೋಷಿಸಿ ಬೆಲೆ ನಿಗದಿಪಡಿಸಲು ಕೋರಿ ಪ್ರಾದೇಶಿಕ ಸಾರಿಗೆ ಇಲಾಖೆಗೆ ಪತ್ರ ಬರೆಯಲು ಹಾಗೂ ಹರಾಜು ಮಾಡಲು ಅನುಮತಿ ಕೋರಬೇಕಾಗಿದೆ. ಈ ಪ್ರಕ್ರಿಯೆಗಳಿಗೆ ಸಭೆಯ ಅನುಮತಿ ಕೋರಿದೆ.

ನಿರ್ಣಯ: ಮ್ಯಾಕ್ಸಿವ್ಯಾನ್ ಮತ್ತು ಕಾಂಟೆಸ್ಸಾ ಎರಡೂ ವಾಹನಗಳಿಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಎಫ್.ಸಿ(ಪಾಸಿಂಗ್)ಗೆ ಅನುಮತಿ ನೀಡದಿರುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದು, ಹರಾಜಿಗೆ ಅನುಮತಿ ಪಡೆದು, ಹರಾಜು ಪ್ರಕ್ರಿಯೆಗೆ ಕ್ರಮವಹಿಸಲು ಸಭೆ ಅನುಮತಿ ನೀಡಿತು.

೧೮೯.೦೭. ೧. ಆವರಣದಲ್ಲಿ ನಿರ್ವಹಿಸುತ್ತಿರುವ ವಿವಿಧ ಕಾಮಗಾರಿಗಳ ೨ನೇ ಹಂತದಲ್ಲಿ ಆನ್‌ಲೈನ್ ಹಾಗೂ ಚೆಕ್ ಮೂಲಕ ಕ್ರೆಡಿಲ್ ಸಂಸ್ಥೆಗೆ ಪಾವತಿಸಿದ ವಿವರಗಳನ್ನು ಲಗತ್ತಿಸಿದೆ. ಒಟ್ಟು ೫ ಕಟ್ಟಡಗಳ ಒಟ್ಟು ಮೊತ್ತ ೨,೩೯,೪೭,೩೦೦/-ಗಳ ಪಾವತಿಗೆ ಸಭೆಯ ಘಟನೋತ್ತರ ಅನುಮೋದನೆ ಕೋರಿದೆ.

೨. ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿದ್ದು, ಯಂತ್ರಕ್ಕೆ ಗುತ್ತಿಗೆದಾರರು ಶೇಕಡ ೨೦ ರಷ್ಟು ರಿಯಾಯಿತಿ ನೀಡಿದ್ದು ಇದರ ವೆಚ್ಚ ರೂ. ೩,೬೪,೮೦೦/-ಗಳ ಪಾವತಿಗೆ ಅನುಮೋದನೆ ಕೋರಿದೆ.

ನಿರ್ಣಯ: ೧ ಆವರಣದಲ್ಲಿ ನಿರ್ವಹಿಸುತ್ತಿರುವ ವಿವಿಧ ಕಾಮಗಾರಿಗಳಿಗೆ ೨ನೇ ಹಂತದಲ್ಲಿ ಕ್ರೆಡಿಲ್ ಸಂಸ್ಥೆಗೆ ಪಾವತಿಸಿದ ಮೊತ್ತ ರೂ.೨,೩೯,೪೭,೩೦೦/-(ಎರಡು ಕೋಟಿ ಮುವತ್ತೊಂಭತ್ತು ಲಕ್ಷದ ನಲವತ್ತೇಳು ಸಾವಿರದ ಮೂರು ನೂರು ರೂ ಮಾತ್ರ)ಗಳಿಗೆ ಸಭೆಯ ಘಟನೋತ್ತರ ಅನುಮೋದನೆ ನೀಡಿತು.

೨ ವಿವಿಯ ಆವರಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಿದ ವೆಚ್ಚದ ಮೊತ್ತ ರೂ.೩,೬೪,೮೦೦/- (ಮೂಲ ಲಕ್ಷದ ಅರವತ್ನಾಲ್ಕು ಸಾವಿರದ ಎಂಟುನೂರು ರೂ ಮಾತ್ರ)ಗಳ ಪಾವತಿಗೆ ಸಭೆ ಅನುಮೋದನೆ ನೀಡಿತು.

**೧೮೯.೦೮.** **ಡಾ. ಎ.ಎಸ್. ಪ್ರಭಾಕರ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಇವರು ದಿನಾಂಕ ೦೧.೦೯.೨೦೧೭ರಿಂದ ವರ್ಷ ಕಾಲ ಸೆಬಾಟಿಕಲ್ ರಜೆ ಕೋರಿದ್ದಾರೆ ಹಾಗೂ ವಾಲ್ಮೀಕಿ ಅಧ್ಯಯನ ಪೀಠದ ಸಂಚಾಲಕರಾಗಿದ್ದು ಸಂಚಾಲಕತ್ವದ ಜವಾಬ್ದಾರಿಯನ್ನು ಬೇರೊಬ್ಬರಿಗೆ ವಹಿಸಲು ಕೋರಿದ್ದಾರೆ. ವಾಲ್ಮೀಕಿ ಅಧ್ಯಯನ ಪೀಠದ ಸಂಚಾಲಕರಾಗಿ ಪ್ರೊ. ವೀರೇಶ್ ಬಡಿಗೇರ ಇವರನ್ನು ನಿಯೋಜಿಸುವ ಬಗ್ಗೆ ಅನುಮೋದನೆ ಕೋರಿದೆ.**

**ನಿರ್ಣಯ:** ಡಾ. ಎ.ಎಸ್. ಪ್ರಭಾಕರ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ ಇವರ ಕೋರಿಕೆಯನ್ನು ಸಭೆಯು ಪರಿಶೀಲಿಸಿ ಸೆಬಾಟಿಕಲ್ ರಜೆಗೆ ಅನುಮೋದನೆ ನೀಡಿತು. ಹಾಗೂ ವಾಲ್ಮೀಕಿ ಅಧ್ಯಯನ ಪೀಠದ ಸಂಚಾಲಕರನ್ನಾಗಿ ಪ್ರೊ. ವೀರೇಶ್ ಬಡಿಗೇರ ಇವರನ್ನು ನಿಯೋಜಿಸಲು ಸಭೆ ಸೂಚಿಸಿತು.

**೧೮೯.೦೯.** **೨೦೧೭-೧೮ನೇ ಸಾಲಿನ ಸ್ನಾತಕ, ಸ್ನಾತಕೋತ್ತರ, ಎಂಎ.ಪಿಎಚ್.ಡಿ. ಸಂಯೋಜಿತ ಪದವಿ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಅನುಶಾಸನಗಳಿಗೆ ಅನುಮೋದನೆ ಕೋರಿದೆ.**

**ನಿರ್ಣಯ:** ಮಂಡಿಸಲಾದ ೨೦೧೭-೧೮ನೇ ಸಾಲಿನ ಸ್ನಾತಕ, ಸ್ನಾತಕೋತ್ತರ, ಎಂಎ.ಪಿಎಚ್.ಡಿ. ಸಂಯೋಜಿತ ಪದವಿ ಹಾಗೂ ಡಿಪ್ಲೊಮಾ ಕೋರ್ಸ್‌ಗಳ ಅನುಶಾಸನಗಳಿಗೆ ಸಭೆ ಅನುಮೋದನೆ ನೀಡಿತು.

**೧೮೯.೧೦.** **ಕನ್ನಡ ವಿಶ್ವವಿದ್ಯಾಲಯದ ೨೦೧೬-೧೭ನೇ ಸಾಲಿನ ವಾರ್ಷಿಕ ಲೆಕ್ಕಪತ್ರ(Annual accounts)ಗಳಿಗೆ ಕಾರ್ಯಕಾರಿ ಸಮಿತಿ ಅನುಮೋದನೆ ಕೋರಿದೆ.**

**ನಿರ್ಣಯ:** ಹಣಕಾಸು ವಿಭಾಗವು ಸಲ್ಲಿಸಿರುವ ಕನ್ನಡ ವಿಶ್ವವಿದ್ಯಾಲಯದ ೨೦೧೬-೧೭ನೇ ಸಾಲಿನ ವಾರ್ಷಿಕ ಲೆಕ್ಕಪತ್ರ(Annual accounts)ಗಳಿಗೆ ಸಭೆಯು ಅನುಮೋದನೆ ನೀಡಿತು.

**೧೮೯.೧೧.** **ಕನ್ನಡ ವಿಶ್ವವಿದ್ಯಾಲಯದ ಬಾಹ್ಯ ಮಾರ್ಗದರ್ಶಕರಿಗೆ ಹಾಗೂ ಸಹ ಮಾರ್ಗದರ್ಶಕರಿಗೆ ವಿದ್ಯಾರ್ಥಿಗಳ ಸಂಖ್ಯೆ ನಿಗದಿಪಡಿಸುವ ಕುರಿತು.**

**ನಿರ್ಣಯ:** ಕನ್ನಡ ವಿಶ್ವವಿದ್ಯಾಲಯದ ಬಾಹ್ಯ ಮಾರ್ಗದರ್ಶಕರಿಗೆ ಹಾಗೂ ಸಹ ಮಾರ್ಗದರ್ಶಕರಿಗೆ ವಿದ್ಯಾರ್ಥಿಗಳ ಸಂಖ್ಯೆ ನಿಗದಿಪಡಿಸುವ ಕುರಿತು ವಿಶ್ವವಿದ್ಯಾಲಯದ ನಿಯಮಾನುಸಾರ ಕ್ರಮಕೈಗೊಳ್ಳಲು ಅನುಮೋದನೆ ನೀಡಿತು.

**೧೮೯.೧೨.** **ವಿಶ್ವವಿದ್ಯಾಲಯದ ಬೆಳ್ಳಿಹಬ್ಬದ ನಿಮಿತ್ತ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಆಡಳಿತ ಸಿಬ್ಬಂದಿ ಹಾಗೂ ತಾತ್ಕಾಲಿಕ ಸಿಬ್ಬಂದಿಗಳು ವಸ್ತ್ರಗಳನ್ನು ಕೋರಿರುವ ಬಗ್ಗೆ.**

**ನಿರ್ಣಯ:** ಸದರಿ ಮನವಿಯನ್ನು ಪರಿಶೀಲಿಸಿ ಬೆಳ್ಳಿಹಬ್ಬದ ನಿಮಿತ್ತ ದಿನಾಂಕ.೧೨.೦೯.೨೦೧೭ರಂದು ಧರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿಗಳು, ಆಡಳಿತ ಸಿಬ್ಬಂದಿ ಹಾಗೂ ತಾತ್ಕಾಲಿಕ ಸಿಬ್ಬಂದಿಗಳಿಗೆ ವಸ್ತ್ರಗಳನ್ನು ಸರ್ಕಾರಿ ಸಂಸ್ಥೆಗಳಿಂದ ಖರೀದಿಸಿ ನೀಡಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಿತು.

**೧೮೯.೧೩.** **ತಾತ್ಕಾಲಿಕ ಸಿಬ್ಬಂದಿಗಳು ವೇತನ ಹೆಚ್ಚಿಸುವಂತೆ ಕೋರಿರುವ ಮನವಿ ಕುರಿತು.**

**ನಿರ್ಣಯ:** ತಾತ್ಕಾಲಿಕ ಸಿಬ್ಬಂದಿಗಳು ವೇತನ ಹೆಚ್ಚಿಸುವಂತೆ ಕೋರಿರುವ ಮನವಿಯನ್ನು ಕುರಿತು ಸಭೆಯು ಚರ್ಚಿಸಿ ವಿಶ್ವವಿದ್ಯಾಲಯಕ್ಕೆ ಹೊರೆಯಾಗದಂತೆ ಬೆಳ್ಳಿಹಬ್ಬದ ನಿಮಿತ್ತ ನೌಕರರ ಸೇವಾವಧಿಯನ್ನು ಆಧರಿಸಿ ವೇತನವನ್ನು ಹೆಚ್ಚಿಸಲು ಮಾನ್ಯ ಕುಲಪತಿಗಳಿಗೆ ಸಭೆಯು ಅಧಿಕಾರ ನೀಡಿತು.

ಕುಲಸಚಿವರ ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು
ಪದನಿಮಿತ್ತ ಕಾರ್ಯದರ್ಶಿ

ಕುಲಪತಿಗಳು
ಅಧ್ಯಕ್ಷರು